# IN THE COURT OF THE ADDL. SENIOR CIVIL JUDGE & JMFC., GUBBI

# **OS - 300/2024**

Witness present and duly sworn on : 04.03.2026.

Further cross Examination: by Counsel for Plaintiff :

ನಾನು ವಾದಿಗಳ ಸರ್ವೆ ನಂ.66/1 ರಲ್ಲಿ 06.08 ಗುಂಟೆ ಮತ್ತು ಸರ್ವೆ ನಂ.65/6 ರಲ್ಲಿ 2 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವ ಕಾರಣ ಅವರು ಈ ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ನಮ್ಮ ಆಸ್ತಿಗಳ ಅಳತೆ ಮಾಡಿಸಿರಲಿಲ್ಲ. ನನ್ನ ಮತ್ತು ನನ್ನ ಹೆಂಡತಿಯ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆದ ನಂತರ ನಾವು ನಮ್ಮ ಜಮೀನನ್ನು ಅಳತೆ ಮಾಡಿಸಿರುತ್ತೇವೆ. ನಾವು ಸರ್ವೆ ನಂ.66/4 ಜಮೀನನ್ನು ಅಳತೆ ಮಾಡಿಸಿರುತ್ತೇವೆ. ನಾವು ಸರ್ವೆ ನಂ.66/5 ರಲ್ಲಿ 16 ಗುಂಟೆ ಜಮೀನನ್ನು ಅಳತೆ ಮಾಡಿಸಿಲ್ಲ. ನಾವು 2019 ರಲ್ಲಿ ಅಳತೆ ಮಾಡಿಸಿರುತ್ತೇವೆ. ನಾವು 2019 ರಲ್ಲಿ ಅಳತೆ ಮಾಡಿಸಿಲ್ಲ ಆದರೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು 2019 ರಲ್ಲಿ ಅಳತೆ ಮಾಡಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದಿರಾ ಎಂದರೆ ಅಳತೆ ಸಮಯದಲ್ಲಿ ಗಿರೀಶ್ ರವರು ಅಳತೆಯ ಕಲ್ಲನ್ನು ನಿಲ್ಲಿಸಲು ಬಿಡಲಿಲ್ಲ ಆದ ಕಾರಣ ಅಳತೆ ಕಾರ್ಯ ಪೂರ್ಣ ಆಗಲಿಲ್ಲ. ಯಾವುದೇ ಅಳತೆ ಮಾಡಿಸದೆ, ಗಿರೀಶ್ ರವರು ತೊಂದರೆ ಮಾಡದೆ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನಿಗೆ ಕಲ್ಲು ಹಾಕಿಕೊಂಡಿರುತ್ತೇನೆ. ಒತ್ತುವರಿಯಿಂದ ಕಲ್ಲು ಕಂಬ ಹಾಕಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ದಿನಾಂಕಃ 18.07.2025 ರಂದು ನಮ್ಮ ಜಮೀನನ್ನು ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆಯ ಸಮಯದಲ್ಲಿ ಹಾಜು ಬಾಜು ದಾರಿಗೆ ನೋಟಿಸ್ ನೀಡಿದ್ದರು. ಸಾಮಾನ್ಯವಾಗಿ ಅಳತೆ ಮಾಡಿದಾಗ ಒತ್ತುವರಿ ಇದ್ದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಒತ್ತುವರಿ ಆಗಿರುವ ಬಗ್ಗೆ ವರದಿ ನೀಡಿರುತ್ತಾರೆಂದರೆ ಒತ್ತುವರಿ ಆಗಿಲ್ಲ ಎಂದು

ಹೇಳಿರುತ್ತಾರೆ. ಮಾಲೀಕತ್ವದ ಸ್ವಾಧೀನದಿಂದ ಜಾಸ್ತಿ ಇದ್ದರು ಸಹ ಒತ್ತುವರಿ ಆಗಿಲ್ಲ ಎಂದು ವರದಿ ನೀಡಿರುತ್ತಾರೆಂದರೆ ಸರಿಯಲ್ಲ. ನಾವು ಮಾಲೀಕತ್ವಕ್ಕಿಂತ ಜಾಸ್ತಿ ಸ್ವಾಧೀನ ಇರುವ ಕಾರಣ ಬೇರೆಯವರು ಒತ್ತುವರಿ ಮಾಡಿಲ್ಲ ಎಂದು ವರದಿ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಅಳತೆಯ ಸಮಯದಲ್ಲಿ ನಾವು ವಾದಿಯ ಜಮೀನಿನಲ್ಲಿ 6½ ಗುಂಟೆ ಒತ್ತುವರಿ ಮಾಡಿರುವ ಬಗ್ಗೆ ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ನಿಡಿ-3 ಮತ್ತು 4 ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾವು ವಾದಿಯ ಜಮೀನುಗಳಲ್ಲಿ 6 ½ ಗುಂಟೆ ಮತ್ತು 2 ಗುಂಟೆ ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಿದ್ದೇವೆಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಮೀನನ್ನು ವಾದಿಗೆ ಬಿಟ್ಟು ಕೊಡಬೇಕಾಗುತ್ತದೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi